[redacted]



# ಹೈಟೆಕ್ ಗ್ರಂಥಾಲಯ ನಿರ್ಮಾಣ ಕಾಮಗಾರಿಗೆ ಸಚಿವ ಸತೀಶ ಜಾರಕಿಹೊಳಿ ಚಾಲನೆ



ಯಮಕನಮರಡಿ: ಹುಕ್ಕೇರಿ ತಾಲೂಕಿನ ಯಮಕನಮರಡಿ ಗ್ರಾಮದಲ್ಲಿ ಶುಕ್ರವಾರ ದಿ. 08 ರಂದು ಲೋಕೋಪಯೋಗಿ ಇಲಾಖೆ ಯೋಜನೆಯಡಿಯಲ್ಲಿ ಮಂಜೂರಾದ 1 ಕೋಟಿ 50 ಲಕ್ಷ ರೂ. ವೆಚ್ಚದಲ್ಲಿ ಮಂಜೂರಾದ ಹೈಟೆಕ್ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಸಚಿವ ಸತೀಶ ಜಾರಕಿಹೊಳಿಯವರು ಚಾಲನೆ ನೀಡಿದರು. ನಂತರ ಸಚಿವ ಸತೀಶ ಜಾರಕಿಹೊಳಿ ಮಾತನಾಡಿ ಶಿಕ್ಷಣ ಸಂಸ್ಥೆಗಳು, ಶಿಕ್ಷಕರು ವಹಿಸುವ ಪಾತ್ರದಷ್ಟೇ ಗ್ರಂಥಾಲಯಗಳು ಸಹ ಪ್ರಮುಖ ಪಾತ್ರ ವಹಿಸುತ್ತವೆ. ಜ್ಞಾನಾರ್ಜನೆಯಲ್ಲಿ ಗ್ರಂಥಾಲಯಗಳು ಬಹುಮುಖ ಪಾತ್ರ ವಹಿಸುತ್ತವೆ. ಇಂದು ಪ್ರತಿಯೊಂದು ವಿಷಯಗಳಲ್ಲಿ ಗ್ರಂಥಗಳು ಲಭ್ಯವಿದ್ದು, ವಿದ್ಯಾರ್ಥಿಗಳು ಓದುಗರು ಅವುಗಳ ಪ್ರಯೋಜನೆ ಪಡೆದುಕೊಳ್ಳಬೇಕೆಂದು ಸಚಿವ ಸತೀಶ ಜಾರಕಿಹೊಳಿ ಕರೆ ನೀಡಿದರು. ಈ ವೇಳೆಯಲ್ಲಿ ಯಮಕನಮರಡಿ ಗ್ರಾ.ಪಂ ಅಧ್ಯಕ್ಷೆ ಆಸ್ಮಾ ಫನಬಂದ ಉಪಾಧ್ಯಕ್ಷ ರಾಜು ಕುದರಿ, ಬೆಳಗಾವಿ ಜಿಲ್ಲಾ ಕಾಂಗ್ರೇಸ್ ಘಟಕದ ಅಧ್ಯಕ್ಷ ವಿನಯ ನಾವಲಗಟ್ಟಿ, ಚಿಕ್ಕೋಡಿ ಜಿಲ್ಲಾ ಕಾಂಗ್ರೇಸ್ ಘಟಕದ ಅಧ್ಯಕ್ಷ ಲಕ್ಷ್ಮಣ ಚಿಂಗಳೆ, ಕಿರಣಸಿಂಗ ರಜಪೂತ, ಈರಣ್ಣಾ ಬಿಸಿರೊಟ್ಟಿ, ರವೀಂದ್ರ ಜಿಂಡ್ರಾಳಿ, ಅಸ್ಲಂ ಫಕಾಲಿ, ಶೌಕತ ಖಾಜಿ, ಶರೀಫ ಬೇಪಾರಿ, ದೇವಪ್ಪ ಹುನ್ನೂರಿ,ಗಿರೀಶ ಮಿತ್ರಿಕೋಟಿ, ಎಇಇ ಪ್ರವೀಣ ಮಾಡ್ಯಾಳ, ಬಸವರಾಜ ಶಿರಪ್ಪಗೋಳ, ಸಂಜಯ ಮಾಳಗಿ, ಪಿಡಿಓ ಎಸ್.ಎಸ್. ಡಂಗ, ಮೂಡಲಗಿ ಕನಸ್ಟ್ರಕ್ಷನ ಇಲಿಯಾಸ ಮೂಡಲಗಿ, ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಕಣಬರ್ಗಿ ಲೇಔಟ್ ಕಾಮಗಾರಿ ಚಾಲನೆ



ಬೆಳಗಾವಿ: ಶಾಸಕ ಆಸೀಫ್ (ರಾಜು) ಸೇಠ್, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಅಧಿಕಾರಿಗಳ ಶ್ರಮದಿಂದ ಕಣಬರ್ಗಿ ಲೇಔಟ್ ಕಾಮಗಾರಿ ಪುನಾರಂಭಗೊಂಡಿದ್ದು, ಭೂಮಿ ಪೂಜೆ ನೆರವೇರಿಸಲಾಗಿದೆ. ಲೋಕಸಭೆ ಚುನಾವಣೆ ನಂತರ ಕಾಮಗಾರಿ ಇನ್ನಷ್ಟು ಚುರುಗೊಳಿಸಲಾಗುವುದು ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದರು. ಬೆಳಗಾವಿ ನಗರದ ನಗರಾಭಿವೃದ್ಧಿ ಪ್ರಾಧಿಕಾರದ ಯೋಜನೆ ಸಂಖ್ಯೆ 6 ಕಣಬರ್ಗಿ ಲೇಔಟ್ ನ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಬೆಳಗಾವಿ ಪ್ರಾಧಿಕಾರದ ಭೂ ಮಾಲೀಕರ ಸಹಭಾಗಿತ್ವದ ವಸತಿ ವಿನ್ಯಾಸ ಯೋಜನೆ ಫಿರೋಜ್ ಸೇಠ್ ಶಾಸಕರಾದ ಸಮಯದ ಯೋಜನೆಯಾಗಿದೆ. ತಾಂತ್ರಿಕ ಕಾರಣಗಳಿಂದ ಯೋಜನೆ ವಿಳಂಬಯಾಗಿತ್ತು. ಈಗಿನ ಶಾಸಕ ಆಸೀಫ್ (ರಾಜು) ಸೇಠ್ ಶ್ರಮದಿಂದ ಕಣಬರ್ಗಿ ಲೇಔಟ್ ಕಾಮಗಾರಿ ಪುನರಾರಂಭಗೊಂಡಿದೆ ಎಂದು ತಿಳಿಸಿದರು.

ಶಾಸಕ ಆಸೀಫ್ (ರಾಜು) ಸೇಠ್ ಮಾತನಾಡಿ, ಕಣಬರ್ಗಿ ಲೇಔಟ್ ಎಂದೂ ಹೆಸರು ವಾಸಿಯಾದ ಯೋಜನೆ ಈ ಹಿಂದೆ ಫಿರೋಜ್ ಸೇಠ್ ಕಾಲದಲ್ಲಿ ಆಗಬೇಕಿತ್ತು. ಕೆಲವೊಂದು ಸಮಸ್ಯೆಗಳಿಂದ ಆಗಿಲ್ಲ. ಶೀಘ್ರದಲ್ಲಿ ಅಭಿವೃದ್ಧಿ ಕೆಲಸ ಆರಂಭಗೊಳ್ಳಲಿದ್ದು, ಈ ಯೋಜನೆ 135 ಎಕರೆ ವ್ಯಾಪ್ತಿ ಹೊಂದಿದ್ದು, ಒಂದೂವರೆ ವರ್ಷದಲ್ಲಿ ಪೂರ್ಣಗೊಳಿಸುವ ಗುರಿ ಇದೆ ಎಂದು ಹೇಳಿದರು.

ಇದೇ ವೇಳೆ ಸಚಿವ ಸತೀಶ್ ಜಾರಕಿಹೊಳಿ ಅವರು ಬೆಳಗಾವಿ ನಗರದ ನಗರಾಭಿವೃದ್ಧಿ ಪ್ರಾಧಿಕಾರದ ಯೋಜನೆ ಸಂಖ್ಯೆ 6 ಕಣಬರ್ಗಿ ಲೇಔಟ್ ನ ಕಾಮಗಾರಿಯ ನೀಲ ನಕ್ಷೆ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಬುಡಾ ಆಯುಕ್ತ ಶಕೀಲ್ ಅಹಮದ್, ಜಿಪಂ ಮಾಜಿ ಉಪಾಧ್ಯಕ್ಷ ಅರುಣ ಕಟಾಂಬಳೆ ಸೇರಿದಂತೆ ಹಲವು ಮುಖಂಡರು, ಅಧಿಕಾರಿಗಳು ಇದ್ದರು.

# ಎಂಸ್ಸೆಸ್ಸೆಆರ್ ಪ್ರೌಢಶಾಲೆಯಲ್ಲಿ ವಿಶೇಷ ಭೋಜನ ಕಾರ್ಯಕ್ರಮ



ಬೈಲಹೊಂಗಲ : ವಿದ್ಯಾರ್ಥಿಗಳು ಆಲಸ್ಯ ಜೀವನ ತೊರೆದು ಹಾಕಬೇಕು. ಸದಾ ಕ್ರೀಯಾಶೀಲರಾಗಿ ಅಧ್ಯಯನ ಮಾಡಿದರೆ ಯಶಸ್ಸು ನಿಶ್ಚಿತ ಎಂದು ನಿವೃತ್ತ ಶಿಕ್ಷಕ ಕೆ.ಎಂ.ಸಂಗೊಳ್ಳಿ ಹೇಳಿದರು. ಪಟ್ಟಣದ ಪುರಸಭೆ ಸಂಚಾಲಿತ ಶೂರ ಸಂಗೊಳ್ಳಿ ರಾಯಣ್ಣ ಪ್ರೌಢಶಾಲೆಯಲ್ಲಿ ನಡೆದ ವಿಶೇಷ ಭೋಜನ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ಇಂದು ಮಾಡುವ ಕೆಲಸ ನಾಳೆ, ನಾಡಿದ್ದು ಮಾಡಿದರೆ ಆಯಿತೆಂದು ಆಲಸ್ಯ ಮಾಡದೆ , ಇಂದಿನ ಕೆಲಸ ಈ ಕ್ಷಣವೇ ಮಾಡುವಂತಹ ಮನೋಭಾವನೆ ನಮ್ಮದಾಗಿಸಿಕೊಳ್ಳಬೇಕು. ಪರೀಕ್ಷೆಗಳು 20 ದಿನಗಳು ಬಾಕಿ ಎಂದು ನಕಾರಾತ್ಮಕ ಚಿಂತನೆಗಳನ್ನು ಬಿಟ್ಟು,ಪ್ರತಿ ಕ್ಷಣ ಓದುವ ಹಂಬಲವನ್ನು ಪ್ರತಿಯೊಬ್ಬ ವಿದ್ಯಾರ್ಥಿಗಳು ರೂಡಿಸಿಕೊ ಳ್ಳುವುದರಿಂದ ಸುಲಭವಾಗಿ ಯಶಸ್ಸು ಕಾಣಬಹುದು.ನಿವೃತ್ತ ಮುಖ್ಯಾಧ್ಯಾಪಕರಾದ ಉಳವಪ್ಪ ತುರಮರಿ, ರಮೇಶ ಪಾರಿಶ್ವಾಡ ಮಾತನಾಡಿ, ನಿತ್ಯ ಬೆಳಗ್ಗೆ 8ಕ್ಕೆ ಆಗಮಿಸಿ, ಪರೀಕ್ಷೆ ಬರೆದ ಶಾಲಾ ಮಕ್ಕಳಿಗೆ ರಸಭೊರಿ ಭೋಜನ ಏರ್ಪಡಿಸಿದ್ದು ಶ್ಲಾಘನೀಯವಾಗಿದೆ ಎಂದರು. ಮುಖ್ಯಾಧ್ಯಾಪಕ ಎಂ.ಸಿ.ಹಂಗರಕಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ವಿದ್ಯಾರ್ಥಿಗಳಾದ ಚಿನ್ಮಯ ಸಿದ್ಧನ್ನವರ, ವರುಣ ಭಾವಿ, ಮೇಘಾ ದಡ್ಡಿ, ವಿಶ್ವನಾಥ ಮತ್ತಿಕೊಪ್ಪ, ನಂದಿತಾ ಬಾರಕೇರ್, ಸವಿತಾ ತೋರಗಲ್,ರೇಮಾ ಮಂಜಳಕರ ವೇದಿಕೆಯಲ್ಲಿದ್ದರು.ವಿಶೇಷ ಆಹ್ವಾನಿತರಾಗಿ ಇಂಗ್ಲೀಷ್ ತಜ್ಞ ಎಂ.ಐ.ಪೂಜಾರ, ನಿವೃತ್ತ ಮುಖ್ಯಾಧ್ಯಾಪಕರಾದ ಎಂ.ವ್ಹಿ.ನಾಗನೂರ, ಎಸ್.ಬಿ.ಬೋರಕನವರ, ವಕೀಲ ವಿಜಯ ಪತ್ತಾರ, ನಿವೃತ್ತ ಶಿಕ್ಷಕರಾದ ಎಸ್.ಎಸ್.ಬಳಿಗಾರ, ಎನ್.ಐ.ಬಡಿಗೇರ,ಎಸ್.ಆರ್. ಕೊಳೇಕರ, ಎ.ಎಂ.ಕರ್ಕಿ, ಸುಲೋಚನಾ ಹೊಸಮನಿ, ಗೌರಮ್ಮ ಕರ್ಕಿ ಆಗಮಿಸಿದ್ದರು. ಶಿಕ್ಷಕರಾದ ಪ್ರಕಾಶ ಹಸರಂಗಿ, ಬಾಳೇಶ್ ಬೋರಗಲ್, ಈಶ್ವರ ಮದನಭಾವಿ, ಐ.ಎಂ.ದಿವಾಣದ, ಮಂಜು ಗರಗದ, ವಿಜಯಲಕ್ಷ್ಮೀ ಕುಲಕರ್ಣಿ, ವಿಜಯಾ ಹಸರಂಗಿ, ಗಂಗಮ್ಮ ತುರಮರಿ, ರುಬೀನಾ ಮುಲ್ಲಾನವರ, ಇಫ್ರಾ ಮುಲ್ಲಾ, ಶಿವು ಶಿರವಂತಿ ಹಾಗೂ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಶಿಕ್ಷಕಿ ಗೀತಾ ಸೊಲಬನ್ನವರ ಸ್ವಾಗತಿಸಿದರು. ವಿದ್ಯಾರ್ಥಿನಿಯರಾದ ಪ್ರೀತಿ ಮುನವಳ್ಳಿ, ಸಾವಿತ್ರಿ ಕುಂಬಾರ ನಿರೂಪಿಸಿದರು. ನಿವೃತ್ತ ಶಿಕ್ಷಕರು, ವಿದ್ಯಾರ್ಥಿ–ವಿದ್ಯಾರ್ಥಿನಿಯರು ಜತೆಗೂಡಿ ವಿಶೇಷ ಭೋಜನ ಸವಿದು ತಮ್ಮ ಶಾಲಾ ದಿನಗಳನ್ನು ಮೆಲುಕು ಹಾಕಿದರು.

ವರದಿ:ಈಶ್ವರ ಶಿಲ್ಲೇದಾರ.

# ಉಗಾರ ಖುರ್ದ ಪುರಸಭೆ ವ್ಯಾಪ್ತಿಯ ಸಾರ್ವಜನಿಕರ ಗಮನಕೆ

ಬೆಳಗಾವಿ,ಮಾ.–: ಉಗಾರ ಖುರ್ದ ಪುರಸಭೆ 2024–25 ರ ಸಾಲಿನ ಆಸ್ತಿಕರ ಪಾವತಿಗೆ ಶೇ. 5 ರಷ್ಟು ರಿಯಾಯಿತಿ ನೀಡಲಾಗಿದ್ದು, ಕರದಾತರು ಅವಧಿ ಮುಗಿಯುದರೊಳಗೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿ ಮಾಡುವಂತೆ ಪುರಸಭೆ ಮುಖ್ಯಾಧಿಕಾರಿಗಳು ತಿಳಿಸಿರುತ್ತಾರೆ.

ಕರದಾತರು ತಮ್ಮ ಆಸ್ತಿ ತೆರಿಗೆಯನ್ನು ಏ.30 ಒಳಗಾಗಿ ತುಂಬಿದಲ್ಲಿ ಶೇ. 5 ರಷ್ಟು ರಿಯಾಯಿತಿ ಇರುತ್ತದೆ. ಮೇ, ಜೂನ್ ತಿಂಗಳಲ್ಲಿ ದಂಡ ರಹಿತವಾಗಿ ಆಸ್ತಿ ತೆರಿಗೆ ತುಂಬಲು ಅವಕಾಶವಿದ್ದು ಒಂದು ವೇಳೆ ವಿಳಂಬವಾದಲ್ಲಿ ಜುಲೈ.1 ರಿಂದ ಪ್ರತಿ ತಿಂಗಳಿಗೆ ಶೇಕಡಾ 2 ರಷ್ಟು ದಂಡ ತುಂಬಿ ತೆರಿಗೆಯನ್ನು ಪಾವತಿಸಬೇಕಾಗುವುದು. ಆದ್ದರಿಂದ ಎಲ್ಲಾ ಆಸ್ತಿ ಮಾಲೀಕರು ತಮ್ಮ ಆಸ್ತಿಯ ಕುರಿತು ಪುರಸಭೆ ಕಚೇರಿಗೆ ಸಂಪರ್ಕಿಸಿ ಸ್ವಯಂ ಘೋಷಿತ ಪಾರ್ಮ್ ಪಡೆದು ಆಸ್ತಿ ತೆರಿಗೆ ಭರ್ತಿ ಮಾಡಬೇಕು.

ಪುರಸಭೆಯಲ್ಲಿ ಪಾವತಿಸಬೇಕಾದ ಆಸ್ತಿ ತೆರಿಗೆ ನೀರಿನ ಕರ, ಉದ್ಯೋಗ ಪರವಾರಣಿಗೆ ಶುಲ್ಕ, ವಾಣಿಜ್ಯ ಮಳಿಗೆ ಮತ್ತು ಇತರೆ ಎಲ್ಲಾ ಶುಲ್ಕ ತೆರಿಗೆ ಪಾವತಿ ಸಾರ್ವಜನಿಕರು ಕಡ್ಡಾಯವಾಗಿ ಸ್ವೀಕೃತಿ ತಂತ್ರಾಂಶದ ಮೂಲಕ ಸೃಜಿಸಿದ ಚಲನ ಮುಖಾಂತರ ಪಡೆದು ನೇರವಾಗಿ ನಿಗದಿಪಡಿಸಿದ ಬ್ಯಾಂಕನಲ್ಲಿ ಪಾವತಿಸಬೇಕಾಗಿರುತ್ತದೆ ಎಂದು ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕಾನೂನು ಅರಿವು–ನೆರವು ಕಾರ್ಯಕ್ರಮ



ಯರಗಟ್ಟಿ: ನಿತ್ಯ ಜೀವನಕ್ಕೆ ಬೇಕಾದ ಕಾನೂನು ಅರಿವು–ನೆರವು ತಿಳಿವಳಿಕೆ ಎಲ್ಲರಿಗೂ ಅಗತ್ಯ ಎಂದು ವಕೀಲರಾದ ಶ್ರೀಮತಿ ರೇವತಿ ಪಾಟೀಲ ಹೇಳಿದರು.

ಸ್ಥಳೀಯ ಸರ್ಕಾರಿ ಬಾಲಕಿಯರ ವಸತಿ ನಿಲಯದಲ್ಲಿ ಶುಕ್ರವಾರ ಹಮ್ಮಿಕೆಜಂಡಿದ್ದ ರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕಾನೂನು ಅರಿವು–ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.ತಾಯಿ ಗರ್ಭದಿಂದ ಸಾಯುವವರೆಗೂ ಕಾನೂನುಗಳ ಅವಶ್ಯಕತೆ ಇದ್ದು, ಕಾನೂನು–ಕಾಯ್ದೆಗಳ ಬಗ್ಗೆ ಅಸಡ್ಡೆ ತೋರಬಾರದು ಎಂದು ಹೇಳಿದರು. ಕಾನೂನಿನ ಅರಿವು ಇರುವವರು ಶೋಷಣೆಯಿಂದ ತಪ್ಪಿಸಿಕೆಳ್ಳುತ್ತಾರೆ. ಕಾನೂನು ತಿಳಿಯದವರು ಸದಾ ಶೋಷಣೆಗೆ ಒಳಪಡುತ್ತಾರೆ. ಮಹಿಳೆಯರು ಸದಾ ಶೋಷಣೆಗೆ ಒಳಪಡುವ ವರ್ಗವಾಗಿದೆ. ಇದು ಸಲ್ಲದು ಎಂದು ಹೇಳಿದರು.

ಸರ್ವರಿಗೂ ಸಮಬಾಳು, ಸಮಪಾಲು ಎನ್ನುವಂತೆ ಕಾನೂನುಗಳು ರಚನೆಯಾಗಿವೆ. ಕಾನೂನು ಪ್ರಕಾರ ಲಂಚ ಜಡುವುದು ಹಾಗೂ ಲಂಚ ತೆಗೆದುಕೆಜಳ್ಳುವುದು ಎರಡೂ ತಪ್ಪು. ಆದರೆ ಈ ಎರಡೂ ಅಂಶಗಳು ಸಮಾಜದಲ್ಲಿಜತ್ತಿಲ್ಲದೆಯೋ ನಡೆಯುತ್ತಿವೆ. ಸಾಮಾನ್ಯ ಜನರು ಎಚ್ಚೆತ್ತು ಜಳ್ಳಬೇಕು ಎಂದು ಹೇಳಿದರು.ಈ ನಿಲಯ ಪಾಲಕರಾದ ಶ್ರೀಮತಿ ಆಶಾ ಪರೀಟ, ಈರಣ್ಣಾ ಹೂಲ್ಲೂರ ಸೇರಿದಂತೆ ಮಕ್ಕಳು ಹಾಗೂ ನಿಲಯದ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಬಸವೇಶ್ವರ ಜಾತ್ರಾ ಮಹೋತ್ಸವ



ಯರಗಟ್ಟಿ: ಸಮೀಪದ ಸತ್ತಿಗೇರಿ ಗ್ರಾಮದ ಮಿಲ್ಲಾನಟ್ಟಿ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ಶನಿವಾರ ಬೆಳಗ್ಗೆಯಿಂದಲೇ ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆದವು.

ಭಕ್ತರು ಬೆಳಗ್ಗೆಯಿಂದಲೇ ಮಿಲ್ಲಾನಟ್ಟಿ ಬಸವೇಶ್ವರರಿಗೆ ರುದ್ರಾಭಿಷೇಕ, ಪುಷ್ಪಾರ್ಚನೆ, ಬಿಲ್ವಾರ್ಚನೆ ಹಾಗೂ ವಿಶೇಷ ಪೂಜೆ ಸಲ್ಲಿಸಿದರು.

ರಥೋತ್ಸವಕ್ಕೂ ಮುಂಚೆ ಕುಂಭಮೇಳ, ನಂದಿಕೋಲ್ ಮೆರವಣಿಗೆ ಹಾಗೂ ವಿವಿಧ ಕಲಾತಂಡಾಗಳಿಂದ ರಥೋತ್ಸವ ಕಾರ್ಯಕ್ರಮ ಸಂಭ್ರಮದಿಂದ ಜರುಗಿತು. ಜಾತ್ರೆ ನೋಡಲು ಅಪಾರ ಸಂಖ್ಯೆಯಲ್ಲಿ ಜನಸ್ತೋಮ ಪಾಲುಗೊಂಡಿತ್ತು. ಭಕ್ತರು ರಥೋತ್ಸವಕ್ಕೆ ಉತ್ತುತ್ತಿ–ಬಾಳೆಹಣ್ಣು ಎಸೆಯುವುದರ ಮೂಲಕ ಬಸವೇಶ್ವರದ ಭಕ್ತಿಗೆ ಪಾತ್ರರಾದರು.

# ಮಹಿಳೆ ಕಾಣೆ

ಗದಗ,ಮಾರ್ಚ 11: ನರೇಗಲ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಗುನ್ನಾ ನಂ. 73/2022 ಕಲಂ: ಮಹಿಳೆ ಕಾಣೆ ನೇದ್ದರಲ್ಲಿ ಕಾಣೆಯಾದ ರೇಣುಕಾ ಕೋಂ ಈಶ್ವರಪ್ಪ ಚಲವಾದಿ ವಯಾ: 41 ವರ್ಷ ಜಾತಿ: ಹಿಂದೂ ಚಲವಾದಿ ಉದ್ಯೋಗ: ಕೂಲಿ ಕೆಲಸ ಸಾ: ನಿಡಗುಂದಿ ತಾ: ಗಜೇಂದ್ರಗಡ ಇವಳು ದಿ: 6/8/2022 ರಂದು ಮುಂಜಾನೆ 11–30 ಗಂಟೆ ಸುಮಾರಿಗೆ ನಿಡಗುಂದಿ ಗ್ರಾಮದ ತನ್ನ ತವರು ಮನೆಯಿಂದ ಗಜೇಂದ್ರಗಡಕ್ಕೆ ಸಂತೆಗೆ ಹೋಗುತ್ತೇನೆ ಎಂದು ಹೇಳಿ ಹೋದವಳು ಇಲ್ಲಿಯವರೆಗೆ ಮನೆಗೆ ಬಾರದೇ ಎಲ್ಲಿಯೋ ಹೋಗಿ ಕಾಣೆಯಾಗಿದ್ದು ಈ ಬಗ್ಗೆ ನರೇಗಲ್ ಪೊಲೀಸ ಠಾಣೆಯಲ್ಲಿ 29–2–2024 ರಂದು ಪ್ರಕರಣ ದಾಖಲಾಗಿರುತ್ತದೆ.

ಸದರಿ ಮಹಿಳೆ ಬಗ್ಗೆ ಮಾಹಿತಿ ಸಿಕ್ಕಲ್ಲಿ ನರೇಗಲ್ ಪೊಲೀಸ ಠಾಣೆ ಮೊಬೈಲ್ ನಂ. 08381–268233/9480804454, ಸಿಪಿಐ ರೋಣ ಮೊಬೈಲ್ ನಂ. 9480804434 , ಗದಗ ಪೊಲೀಸ ಕಂಟ್ರೋಲ್ ರೂಂ ಮೊಬೈಲ್ ನಂ. 9480804400 ನೇದ್ದಕ್ಕೆ ಸಂಪರ್ಕಿಸಬಹುದಾಗಿದೆ.

# ನೇರ ಸಂದರ್ಶನ

ಗದಗ,ಮಾರ್ಚ–:ಗದಗ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಿಂದ ಮಾರ್ಚ 14 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ರೂಮ್ ನಂ 215 ಜಿಲ್ಲಾಡಳಿತ ಭವನ ಗದಗ ಇಲ್ಲಿ ಶ್ರೀರಾಮ ಲೈಫ್ ಕಂಪನಿಯಲ್ಲಿ ಟೆಲಿಕಾಲರ್,ಸೇಲ್ಸ ಎಕ್ಸಿಕ್ಯುಟಿವ್,ಡಾಟಾ ಕಲೆಕ್ಸನ್ ಮತ್ತು ಅನ್ನಪೂರ್ಣ ಫೈನಾನ್ಸ್ ಕಂಪನಿಯಲ್ಲಿ ಪಿಲ್ಡ್ ಕ್ರೆಡಿಟ್ ಆಫೀಸರ್,ಅಸಿಸ್ಟೆಂಟ್ ಬ್ರಾಂಚ್ ಮ್ಯಾನೇಜರ್ ಹುದ್ದೆಗೆ ನೇರ ಸಂದರ್ಶನ ಕರೆಯಲಾಗಿದೆ.18 ರಿಂದ 30 ವರ್ಷದೊಳಗಿನ ಪಿಯುಸಿ ಮತ್ತು ಯಾವುದೇ ಪದವಿ ಪಡೆದ ಅಭ್ಯರ್ಥಿಗಳು ವಿದ್ಯಾರ್ಹತೆಯ ಅಂಕಪಟ್ಟಿ, ರೆಸ್ಯೂಮ್ ಮತ್ತು ಆಧಾರ ಕಾರ್ಡ್ ದ್ವಿಪ್ರತಿ ಝರಾಕ್ಸಗಳೊಂದಿಗೆ ಭಾಗವಹಿಸಬಹುದಾಗಿದೆ. ಭಾಗವಹಿಸುವ ಅಭ್ಯರ್ಥಿಗಳಿಗೆ ನೋಂದಣಿ ಕಡ್ಡಾಯವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08372–220609,6363330688 ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ಬಸವಂತ ಪಿ ಎನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಕ್ಷಯ ವೀರಮುಖ ಸಮಾಜಮುಖಿ ಜನ್ಮ ದಿನ ಆಚರಣೆ



ಹುಕ್ಕೇರಿ : ತಾಲೂಕಿನ ಹೆಬ್ಬಾಳ ಗ್ರಾಮದ ಸಾಮಾಜಿಕ ಕಾರ್ಯಕರ್ತರು ಆದ ಯುವ ಮುಖಂಡ ಅಕ್ಷಯ ವೀರಮುಖ ಅವರು ತಮ್ಮ 34ನೇ ಜನ್ಮ ದಿನವನ್ನು ವಿಭಿನ್ನ, ಸರಳ ಮತ್ತು ಸಮಾಜಮುಖಿಯಾಗಿ ಆಚರಿಸಿಕೊಳ್ಳುವ ಮೂಲಕ ಯುವ ಜನಾಂಗಕ್ಕೆ ಮಾದರಿಯಾಗಿದ್ದಾರೆ.ಕುಟುಂಬ ಸಮೇತ ತೆರಳಿದ ಅಕ್ಷಯ ವೀರಮುಖ ಅವರು ಗ್ರಾಮದ ರುದ್ರಾವಧೂತ ಮಠದ ಕನ್ನಡ ಪ್ರಾಥಮಿಕ ಶಾಲೆ ಮತ್ತು ಅಂಗನವಾಡಿ ಶಾಲೆ ಮಕ್ಕಳಿಗೆ ಪಠ್ಯಪುಸ್ತಕ ಸೇರಿದಂತೆ ಶಾಲಾ ಸಲಕರಣೆ ವಿತರಿಸಿದರು. ನಂತರ ಯಮಕನಮರಡಿ ಸರ್ಕಾರಿ ಆಸ್ಪತ್ರೆ ಒಳರೋಗಿಗಳು, ಗರ್ಭಿಣಿಯರಿಗೆ ಹಣ್ಣು–ಹಂಪಲ ವಿತರಿಸಿದರು.ಬಳಿಕ ಹಿಡಕಲ್ ಡ್ಯಾಮ್ ವಿಶೇಷಚೇತನ (ಬುದ್ಧಿಮಾಂಧ್ಯ) ಮಕ್ಕಳಿಗೆ ಪೌಷ್ಠಿಕ ಆಹಾರ, ಹಣ್ಣು, ಬಿಸ್ಕೀಟ್ ವಿತರಿಸಿ ಮಕ್ಕಳೊಂದಿಗೆ ಕೇಕ್ ಕತ್ತರಿಸಿ ಜನ್ಮ ದಿನ ಆಚರಿಸಿಕೊಂಡು ಜೀವನದ ಸಾರ್ಥಕತೆ ಕಂಡುಕೊಂಡರು. ನಂತರ ಹುನ್ನೂರ ಪ್ರವಾಸಿ ಮಂದಿರದಲ್ಲಿ ಸಮಾಜ ಮುಖಂಡರೊಂದಿಗೆ ನಡೆದ ಚರ್ಚಾಕೂಟದಲ್ಲಿ ಭಾಗಿಯಾದರು.ಮುಖಂ ಡರಾದ ಬಸವರಾಜ ತಳವಾರ, ಉಮೇಶ ಭೀಮಗೋಳ, ರಾಮಕೃಷ್ಣ ಪಾನಬುಡೆ, ಅಶೋಕ ತಳವಾರ, ಗಣಪತಿ ಕಾಂಬಳೆ,ದೀಪಕ ವೀರಮುಖ, ಅಪ್ಪಣ್ಣಾ ಖಾತೇದಾರ, ಶಂಕರ ತಿಪ್ಪನಾಯಿಕ,ಮಾರುತಿ ತಳವಾರ,ಪ್ರವೀಣ ಜಕ್ಕಪ್ಪಗೋಳ, ಸಂಜು ಜೀವನ್ನವರ, ರಮೇಶ ತಳವಾರ, ಮುತ್ತು ಕಾಂಬಳೆ, ಕಾಶಪ್ಪ ಹರಿಜನ, ಕುಮಾರ ತಳವಾರ, ಸಚಿನ್ ಚಿಂಚಣಿ, ಬಾಬು ಕಡಲಗಿ, ಪ್ರಕಾಶ ಕೋಳಿ, ಚಂದ್ರಕಾಂತ ವಾರಕರಿ, ರೋಹತ ತಳವಾರ, ಅಮರ ಶಿಂಗೆ, ವಿನೋದ ಮಾಳಗೆ ಮತ್ತಿತರರು ಉಪಸ್ಥಿತರಿದ್ದರು.

# ಬರಗಾಲ : ಸಹಾಯವಾಣಿ ಆರಂಭ

ಗದಗ ಮಾರ್ಚ–ಜಿಲ್ಲೆಯಲ್ಲಿ ಕುಡಿಯುವ ನೀರಿನ ಪೂರೈಕೆ ಸೇರಿದಂತೆ ಸಾರ್ವಜನಕರಿಗಾಗಿ ಸಹಾಯವಾಣಿಗಳನ್ನು ತಾಲೂಕಾವಾರು ಆರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ತಿಳಿಸಿದ್ದಾರೆ.ತಾಲೂಕಾವಾರು ಸಹಾಯವಾಣಿ ಸಂಖ್ಯೆಗಳು ಇಂತಿವೆ: ಜಿಲ್ಲಾಧಿಕಾರಿಗಳ ಕಚೇರಿ– 08372–239177 ; ಗದಗ–08372–250009 ;ಗಜೇಂದ್ರಗಡ ? 08381–262131 ; ಲಕ್ಷ್ಮೇಶ್ವರ– 08487–273272 ; ಮುಂಡರಗಿ– 08371–262237 ; ನರಗುಂದ–08377–245243 ; ರೋಣ– 08381–267239 ; ಶಿರಹಟ್ಟಿ– 08487–242100.ಸಾರ್ವಜನಕರುಸಹಾಯವಾಣಿಯ ಸದುಪಯೋಗಪಡಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಕೋರಿದ್ದಾರೆ.

# ಉಚಿತ ಟೈಲರಿಂಗ್ ತರಬೇತಿಗೆ ಆಸಕ್ತ ಮಹಿಳೆಯರಿಂದ ಅರ್ಜಿ ಆಹ್ವಾನ

ಬೆಳಗಾವಿ,ಮಾ.–: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ ಫ್ಯಾಶನ್ ಡಿಸೈನಿಂಗ್ (ಟೈಲರಿಂಗ್) 30 ದಿನಗಳ ಉಚಿತ ತರಬೇತಿಯು ಏಪ್ರಿಲ್ 12 ರಿಂದ ಆರಂಭವಾಗಲಿದ್ದು, ಏಪ್ರಿಲ್ 12 ರಂದು ನಡೆಯಲಿರುವ ನೇರ ಸಂದರ್ಶನದಲ್ಲಿ ಗ್ರಾಮೀಣ ಆಸಕ್ತ ನಿರುದ್ಯೋಗಿ ಮಹಿಳೆಯರು ಭಾಗವಹಿಸಬಹುದಾಗಿದೆ.

ಗ್ರಾಮೀಣ ಪ್ರದೇಶದ ಗ್ರಾಮೀಣ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಆಸಕ್ತರು 18 ರಿಂದ 45 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಅಭ್ಯರ್ಥಿಗಳು ಆಧಾರ್ ಕಾರ್ಡ್ ಹಾಗೂ ಬಿಪಿಎಲ್ ಕಾರ್ಡ್ ಹೊಂದಿರಬೇಕು.

ತರಬೇತಿಯು ಕಡ್ಡಾಯವಾಗಿ ವಸತಿಯುತವಾಗಿದ್ದು, ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು ಹಾಗೂ ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣಪತ್ರವನ್ನು ವಿತರಿಸಲಾಗುವುದು.

ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ: 9380162042, 9740982585, 9113880324 ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕರಾದ ರವಿಕುಮಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಪರಿಚಿತ ವ್ಯಕ್ತಿ ಶವ ಪತ್ತೆ

ಬೆಳಗಾವಿ,ಮಾ.11–: ದೇಸೂರು ರೈಲು ನಿಲ್ದಾಣದ ಮಧ್ಯ ಮಾ. 10 ರಂದು ಚಲಿಸುತ್ತಿರುವ ರೈಲು ಗಾಡಿಯ ಮುಂದೆ ಬಿದ್ದು ಅಪರಿಚಿತ ವ್ಯಕ್ತಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ಈ ಕುರಿತು ಬೆಳಗಾವಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತನ ವಯಸ್ಸು 30 ರಿಂದ 35 ಎಂದು ಅಂದಾಜಿಸಲಾಗಿದ್ದು, ಎತ್ತರ 5ಅಡಿ7 ಇಂಚು , ಕಪ್ಪು ಮೈಬಣ್ಣ, ಮೈಯಿಂದ ಸದೃಡ, ಉದ್ದ ಮುಖ ಹಾಗೂ ದುಂಡು ಮೂಗು, ಕಪ್ಪು ಕೂದಲು, ಸಣ್ಣ ಕಪ್ಪು ಮಿಸೆ ದಾಡಿ ಇರುತ್ತವೆ. ಕೆಪ್ಪು ಬಣ್ಣದ ಫುಲ್ ಶರ್ಟಮತ್ತು ತಿಳಿ ಬಣ್ಣದ ಹಾಪ್ ಶರ್ಟ, ಕಪ್ಪು ಬಣ್ಣದ ಫುಲ ಪ್ಯಾಂಟ್ ಕೋರಳಲ್ಲಿ ಕೆಂಪು ದಾರ ಧರಿಸಿರುತ್ತಾರೆ.

ಸದರಿ ಮೃತನ ವಾರಸುದಾರರು ಕಂಡು ಬಂದಲ್ಲಿ ಬೆಳಗಾವಿ ರೈಲ್ವೆ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ 0831–2405273 ಅಥವಾ ಪಿ.ಎಸ್.ಐ ಮೊಬೈಲ್ ನಂ 9480802127 ಸಂರ್ಪಕಿಸಲು ಬೆಳಗಾವಿ ರೈಲ್ವೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೆಳಗಾವಿ ತಹಸೀಲ್ದಾರ್ ಕಚೇರಿ ಆವರಣದಲ್ಲಿ ಬ್ಲಾಕ್ ಮ್ಯಾಜಿಕ್ ಶುರು



ಬೆಳಗಾವಿ: ತಹಸೀಲ್ದಾರ್ ಕಚೇರಿ ಆವರಣದಲ್ಲಿರುವ ಮರಕ್ಕೆ ಕರಿ ಗೊಂಬೆ ಕಟ್ಟಿದ್ದಾರೆ ಸಾರ್ವಜನಕರಲ್ಲಿ ಇದು ಭಯ ಸೃಷ್ಟಿಸುತ್ತಿದೆ ಬೆಳಗಾವಿ ತಹಶೀಲ್ದಾರ ಕಚೇರಿಯನ್ನು ಬೆಳಗಾವಿಯ ಸ್ವಾಮಿ ವಿವೇಕಾನಂದ ಮಾರ್ಗದಲ್ಲಿರುವ ಮಹಾನಗರ ಪಾಲಿಕೆಯ ಹಳೆಯ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

ಈ ಕಚೇರಿಯ ಎಡಭಾಗದಲ್ಲಿ ವಾಹನ ನಿಲುಗಡೆಗೆ ಶೆಡ್ ಇದೆ. ಇಲ್ಲಿ ಈಗಾಗಲೇ ಕೆಲವು ಮರಗಳಿವೆ. ಶನವಾರ ಮರವೊಂದರಲ್ಲಿ ಸುಮಾರು ಒಂದು ಅಡಿ ಉದ್ದದ ಕಪ್ಪು ಗೊಂಬೆ ನೇತಾಡುತ್ತಿರುವುದು ಕಂಡುಬಂದಿದೆ. ಇದು ಸಂಚಲನ ಮೂಡಿಸಿತು. ಮಕ್ಕಳಿಗೆ ಆಟವಾಡಲು ಕೊಟ್ಟ ರೀತಿಯ ಚಿಕ್ಕ ಟೆಡ್ಡಿ ಬೇರ್ ನಂತೆ ಕಾಣುತ್ತಿದ್ದ ಗೊಂಬೆ ಬಾಯಲ್ಲಿ ಜೋಡಿ ಹಲ್ಲುಗಳನ್ನು ಅಳವಡಿಸಿಕೊಂಡಿದಾರೆ. ಇದನ್ನು ನೋಡಿ ಹಲವರು ಬೆಚ್ಚಿಬಿದ್ದರು. ಇಂದು ಅಮವಾಸ್ಯೆ ಇರುವುದರಿಂದ ಯಾರೋ ಮೂಢನಂಬಿಕೆಯಿಂದ ಈ ರೀತಿ ಮಾಡಿದ್ದಾರೆ ಎಂಬ ಚರ್ಚೆ ನಡೆದಿದೆ.ತಹಸೀಲ್ದಾರ್ ಕಚೇರಿಯ ನೆಲ ಅಂತಸ್ತಿನಲ್ಲಿ ಬೆಳಗಾವಿ ಅರಣ್ಯಾಧಿಕಾರಿ ಕೇಂದ್ರವಿದೆ. ಆಧಾರ್ ಕಾರ್ಡ್ ತಿದ್ದುಪಡಿ, ಲೈಟ್ ಬಿಲ್ ಮತ್ತಿತರ ತೆರಿಗೆ ಪಾವತಿಗಾಗಿ ಬೆಳಗಾವಿ ನಗರ ಹಾಗೂ ಹೊರವಲಯದಿಂದ ನಿತ್ಯ ನೂರಾರು ಜನರು ಈ ಕೇಂದ್ರಕ್ಕೆ ಬರುತ್ತಾರೆ. ಕಪ್ಪು ಗೊಂಬೆಯನ್ನು ಕಟ್ಟಿದ ರೀತಿ ನೋಡಿ ಹಲವರು ಬೆಚ್ಚಿಬಿದ್ದರು. ಹಲವರು ಭಯಗೊಂಡಿದ್ದಾರೆ,